ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 1, July-August, 2023, Pp. 1-5.
©*IIMRD*, Mysuru
IIMRD JOURNALS
www.iimrd.com

# ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳಾ ರಾಜಕೀಯ ಮೀಸಲಾತಿ: ಒಂದು ಅವಲೋಕನ

**ರಾಜೇಂದ್ರ ಆರ್***

*ಸಂಶೋಧನಾರ್ಥಿ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಸಾರಾಂಶ: (Abstract)**

*ಸೌಲಭ್ಯ ವಂಚಿತ ಎಲ್ಲಾ ಮಹಿಳೆಯರಿಗೂ ಎಲ್ಲಾ ಕ್ಷೇತ್ರದಲ್ಲೂ ಪ್ರಾತಿನಿಧ್ಯವನ್ನು ಕಲ್ಪಿಸಬೇಕೆಂಬ ಉದ್ದೇಶದಿಂದ ಸಂವಿಧಾನ ರಚನಾಕಾರರು ಸಂವಿಧಾನಾತ್ಮಕವಾಗಿ ಮೀಸಲಾತಿ ಸೌಲಭ್ಯವನ್ನು ಕಲ್ಪಿಸಿದ್ದಾರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ, ಅಲ್ಪಸಂಖ್ಯಾತ, ಆರ್ಥಿಕವಾಗಿ ಹಿಂದುಳಿದ ಮೇಲ್ಜಾತಿ ಸಮುದಾಯವನ್ನು ಒಳಗೊಂಡಂತೆ ಎಲ್ಲಾ ಮಹಿಳೆಯರಿಗೂ ಶಿಕ್ಷಣ, ಉದ್ಯೋಗ, ರಾಜಕೀಯ ಕ್ಷೇತ್ರದಲ್ಲಿ ಮೀಸಲಾತಿ ನಿಡಿದ್ದು, ಮಹಿಳೆಯರ ಸ್ಥಾನಮಾನವನ್ನೂ ಉತ್ತಮ ಪಡಿಸಲು ಸಂವಿಧಾನ ಬದ್ಧವಾಗಿ ಬದುಕಲು ಹಾಗೂ ಸ್ವತಂತ್ರವಾಗಿ ರಾಜಕೀಯ ಕ್ಷೇತ್ರದಲ್ಲಿ ನಿರ್ಧಾರ ತೆಗೆದುಕೊಳ್ಳಬಲ್ಲ ಮಹಿಳೆಯರ ಸಂಖ್ಯೆಯನ್ನು ಹೆಚ್ಚಿಸುತ್ತದೆ. ಪ್ರಸ್ತುತ ಲೇಖನವು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳಾ ರಾಜಕೀಯ ಮೀಸಲಾತಿಯ ಒಂದು ಅವಲೋಕನವನ್ನು ಕುರಿತು ವಿಶ್ಲೇಷಿಸಲಾಗಿದೆ.*

**ಮುಖ್ಯಪದಗಳು (Keywords):** ಮಹಿಳೆ, ಸಂವಿಧಾನ, ಶಿಕ್ಷಣ, ಉದ್ಯೋಗ, ರಾಜಕೀಯ ಮೀಸಲಾತಿ.

## ಪೀಠಿಕೆ

ಭಾರತದಂತಹ ಶ್ರೇಣಿಕೃತ ಸಮಾಜದಲ್ಲಿ ವಂಚಿತ ವರ್ಗಗಳು ಮತ್ತು ಮಹಿಳೆಯರು ಅಧಿಕಾರದ ಸೂತ್ರ ಹಿಡಿಯುವುದೆಂದರೆ ಅದೊಂದು ಕ್ರಾಂತಿಕಾರಿ ಘಟನೆಯೆಂದರೆ ತಪ್ಪಾಗುವುದಿಲ್ಲ. ಇಲ್ಲಿಯವರೆಗೆ ದೇಶದ ಇತಿಹಾಸವನ್ನು ಹಿಂತಿರುಗಿ ನೋಡಿದಾಗ ಮಹಿಳೆಯರಿಗೆ ರಾಜಕೀಯ ಕ್ಷೇತ್ರದಲ್ಲಿ ಗಮನಾರ್ಹವಾದ ಮೀಸಲಾತಿ ಪ್ರಾತಿನಿಧ್ಯವನ್ನು ನೀಡಿರುವುದು ಎಲ್ಲೂ ಕಂಡುಬಂದಿಲ್ಲ. ರಾಜಕೀಯ ರಂಗವು ಇನ್ನು ಪುರುಷರ ಕೋಟೆಯಾಗಿಯೇ ಮುಂದುವರಿದಿದೆ. ಸುಮಾರು 90 ವರ್ಷಗಳಿಂದಲೂ ಈ ಕುರಿತು ಹೋರಾಟ ನಡೆಯುತ್ತಲೇ ಇದೆ. ಈ ಪುರುಷ ಸಮಾಜದಲ್ಲಿ ಮಹಿಳೆಯ ಸ್ಥಾನ ಎರಡನೆಯದು. ಯಾವುದೇ ನಿರ್ಣಯ ತೆಗೆದುಕೊಳ್ಳವಾಗಲೂ ಮಹಿಳೆ ಅಭಿಪ್ರಾಯ ಕೇಳುವುದೇ ಕಡಿಮೆ. ಸಾರ್ವಜನಿಕ ಜೀವನದಲ್ಲಂತೂ ಅತ್ಯಲ್ಪ. ಭಾರತೀಯ ಸಂವಿಧಾನವು ಮಹಿಳೆಗೆ ಪುರುಷನಷ್ಟೇ ಸರಿಸಮಾನ ಸ್ಥಾನವನ್ನು ದಯಾಪಾಲಿಸಿದೆ. ಆದರೆ ಅದನ್ನು ಇದುವರೆಗೆ ಯಾವ ರಾಜಕೀಯ ಪಕ್ಷಗಳೂ ಅನುಷ್ಠಾನಗೊಳಿಸಿಲ್ಲ. ರಾಷ್ಟ್ರವನ್ನು ಮುನ್ನೆಡೆಸಿ

*Please cite this article as: ರಾಜೇಂದ್ರ ಆರ್* (2023). ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳಾ ರಾಜಕೀಯ ಮೀಸಲಾತಿ: ಒಂದು ಅವಲೋಕನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(1). ಪು.ಸಂ.* 1–5

ಅಭಿವೃದ್ಧಿಯತ್ತ ಕೊಂಡೊಯ್ಯಲು ರಾಜಕೀಯ ಕ್ಷೇತ್ರದಲ್ಲಿ ಪುರುಷನೊಂದಿಗೆ ಮಹಿಳೆ ಹೆಜ್ಜೆ ಹಾಕುವುದು. ಇಂದಿನ ದಿನಗಳಲ್ಲಿ ಸ್ತ್ರೀಯರ ರಾಜಕೀಯ ಸಹಭಾಗಿತ್ವವು ಅವರನ್ನು ಶಕ್ತಿಶಾಲಿಗಳನ್ನಾಗಿಸುವ ಅರ್ಥಾತ್ ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಒಂದು ಪ್ರಬಲ ಅಸ್ತ್ರ ಎಂಬುದಾಗಿ ತಿಳಿಯಬಹುದು. ಹೀಗಿದ್ದೂ ರಾಜಕೀಯ ಕ್ಷೇತ್ರವು ಪುರುಷರು ಏಕಸ್ವಾಮ್ಯಕ್ಕೆ ಒಳಗಾಗಿದೆ.

ಆದರೆ ಮಹಿಳಾ ಸಮಾನತೆಯನ್ನು ಸ್ವತಂತ್ರ ಪೂರ್ವದಲ್ಲೇ ಮನಗಂಡಿದ್ದ ಮಹಾತ್ಮಗಾಂಧೀಜಿ 1929ರಲ್ಲೇ "ಯಂಗ್ ಇಂಡಿಯಾ"ದಲ್ಲಿ ಮಹಿಳಾ ಸಮಾನತೆಗೆ ಪ್ರಾಧಾನ್ಯತೆ ನೀಡಿದ್ದರು. ಅವರು ಮತ್ತೆ ಮತ್ತೆ ಮಹಿಳೆಯರ ಸ್ಥಾನಮಾನ ಹೆಚ್ಚಿಸುವ ಬಗ್ಗೆ ಗಮನ ನೀಡಿದ್ದರು. ಈ ನಿಟ್ಟಿನಲ್ಲಿ ನೆಹರೂ ಕೂಡ ಮಹಿಳೆಯರ ಸ್ಥಾನಮಾನಗಳನ್ನು ಹೆಚ್ಚಿಸಿ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಉದೇಶವನ್ನು ಹೊಂದಿದ್ದು ಅವರು ರಾಷ್ಟ್ರೀಯ ಯೋಜನೆಯ ಅಧ್ಯಕ್ಷರಾಗಿದ್ದಾಗ ಆರ್ಥಿಕ ಯೋಜನೆಗಳಲ್ಲಿ ಮಹಿಳೆಯರ ಪಾತ್ರವನ್ನು ಗುರುತಿಸಿದ ನೆಹರು ಮಹಿಳೆಯರು ರಾಜಕೀಯ ಕ್ಷೇತ್ರದಲ್ಲಿ ಮುಖ್ಯ ಪಾತ್ರವಹಿಸಬೇಕೆಂದು ಆಶಿಸಿದ್ದರು. ಗಾಂಧೀಜಿಯ ನಿರೀಕ್ಷೆಯಂತೆ ಲಿಂಗ ಸಮಾನತೆಯನ್ನು ಮೂಲಭೂತ ಹಕ್ಕೆಂದು 1931ರ ಕರಾಚಿ ಅಧಿವೇಶನದಲ್ಲಿ ತೀರ್ಮಾನಿಸಿದರು. ಅಲ್ಲದೆ 1940ರಲ್ಲಿ ಶಾಂತಿನಿಕೇತನದಲ್ಲಿ ಮಹಿಳೆಯರನ್ನುದ್ದೇಶಿಸಿ ಭಾಷಣ ಮಾಡುತ್ತಿದ್ದ ಮಹಾತ್ಮಗಾಂಧೀಜಿಯವರು "ಮಹಿಳಾ ಸದಸ್ಯರ ಸಮರ್ಪಕ ಪಾಲು ಇಲ್ಲದ ಶಾಸನಸಭೆಯನ್ನು ನಾನು ಬಹಿಷ್ಕರಿಸುತ್ತೇನೆ" ಎಂದಿದ್ದರು. ಅಂದರೆ ಇಲ್ಲಿ ಮಹಾತ್ಮ ಗಾಂಧೀಜಿಯವರು ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರಿಗೂ ಪುರುಷನಷ್ಟೇ ಸಮಾನ ಹಕ್ಕುಗಳನ್ನು ನೀಡಬೇಕೆಂದು ಒತ್ತಿ ಹೇಳಿದ್ದರು ಎಂಬುದನ್ನು ಗಮನಿಸಬಹುದು.

**ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳಾ ರಾಜಕೀಯ ಮೀಸಲಾತಿ**

ಪುರುಷ ಸಮಾಜವು ಪ್ರತಿಯೊಂದು ಹಂತದಲ್ಲೂ ಮಹಿಳೆಯರನ್ನು ವಿವಿಧ ರೀತಿಯಲ್ಲಿ ಶೋಷಣೆ ಮಾಡುತ್ತಾ ಬಂದಿರುವುದರಿಂದ ಮಹಿಳಾ ಸಬಲೀಕರಣವು ಅತ್ಯಗತ್ಯವಾಗಿ ವಸ್ತುವಿಷಯವಾಗಿದೆ. ಈ ನಿಟ್ಟಿನನಲ್ಲಿ ಮಹಿಳೆಯರ ತ್ಯಾಗ, ಸಹನೆ, ತಾಳ್ಮೆಯ ಮೌಲ್ಯವನ್ನು ಅರಿತ ಸರ್ಕಾರಗಳು ಭಾರತ ಸಂವಿಧಾನದಲ್ಲಿ 73 ಮತ್ತು 74ನೇ ತಿದ್ದುಪಡಿಗಳನ್ನು ತರುವ ಮೂಲಕ ಪಂಚಾಯತ್‌ರಾಜ್ ವ್ಯವಸ್ಥೆಗೆ ಅಧಿಕಾರ ವಿಕೇಂದ್ರೀಕರಣದ ತತ್ವದ ಆಧಾರದ ಮೇಲೆ ಸೂಕ್ತ ಪ್ರಾತಿನಿಧ್ಯತೆ ನೀಡಲಾಯಿತು. ಭಾರತ ಸಂವಿಧಾನದಲ್ಲಿ 14, 15, 23, 29, 30, 42 ಮತ್ತು 45ನೇ ವಿಧಿಗಳ ಮೂಲಕ ಮಹಿಳಾ ಸಮಾನತೆಯನ್ನು ಖಾತರಿಪಡಿಸಿದ್ದರೂ ಸಹ ಭಾರತೀಯ ಮಹಿಳೆಯರು ಇಂದಿಗೂ ಪ್ರತಿಯೊಂದು ಕ್ಷೇತ್ರಗಳಲ್ಲಿಯೂ ಪುರುಷರದ್ದೇ ಸಮಾನತೆಗೆ ಬರಲು ಸಾಧ್ಯವಾಗುತ್ತಿಲ್ಲ. ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಮಹಿಳೆಯರು ಸಾಕಷ್ಟು ರೀತಿಯ ಪ್ರಗತಿ ಹೊಂದಿದ್ದರೂ ಪುರುಷ ಪ್ರಧಾನ ಸಮಾಜದ ಹಿಡಿತದಿಂದ ರಾಜಕೀಯ ಕ್ಷೇತ್ರದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಸಾಧ್ಯವಿಲ್ಲದಂತಾಗಿದೆ. ಖ್ಯಾತ ಅರ್ಥಶಾಸ್ತ್ರಜ್ಞರಾದ ಡಾ. ಅಮರ್ತ್ಯಾಸೇನ್‌ರವರು ಹೇಳುವಂತೆ "ಪ್ರಜಾ ಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸಬೇಕಾದರೆ, ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರು ರಾಜಕೀಯ ಕ್ಷೇತ್ರದಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳುವಂತೆ ಮಾಡಬೇಕು" ಎಂದಿದ್ದಾರೆ.

ಆದ್ದರಿಂದಾಗಿ ಈ ರೀತಿಯ ಭಾಗವಹಿಸುವಿಕೆಯಿಂದಾಗಿ ನಿರ್ಲಕ್ಷತೆಗೆ ತುಳಿತಕ್ಕೆ ಒಳಗಾಗಿರುವ ಮಹಿಳೆಯರ ಸಬಲೀಕರಣವು ಪ್ರಸ್ತುತ ಅಭಿವೃದ್ಧಿಶೀಲ ಭಾರತ ದೇಶಕ್ಕೆ ಅತ್ಯಗತ್ಯವಾದುದಾಗಿದೆ.

ಭಾರತದ ಸನ್ನಿವೇಶದಲ್ಲಿ ಮೀಸಲಾತಿಯ ಪರಿಕಲ್ಪನೆ ಹೊಸತಾದ ಪರಿಭಾವನೆಯೇನಲ್ಲ. ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಿಂದುಳಿದ ಮತ್ತು ದಮನಿತ ಸಮುದಾಯಗಳನ್ನು ಸಮಾಜದ ಮುಖ್ಯವಾಹಿನಿಗೆ ತರಲು ಭಾರತ ಸಂವಿಧಾನ ಮೀಸಲಾತಿ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಅಂದರೆ ಶಿಕ್ಷಣ ಕ್ಷೇತ್ರದಲ್ಲಿ ಸರ್ಕಾರಿ ಹುದ್ದೆಗಳಲ್ಲಿ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಸಾಕಷ್ಟು ಪ್ರಾತಿನಿಧ್ಯವಿಲ್ಲದೆ ಹಿಂದುಳಿದ ಮತ್ತು ಶೋಷಿತ ಸಮುದಾಯದವರಿಗೆ ಕೆಲವು ಸ್ಥಾನಗಳನ್ನು ಮೀಸಲಾಗಿಡುವ ಮೂಲಕ ಆ ಕ್ಷೇತ್ರಗಳಲ್ಲಿ ಈ ಸಮುದಾಯದವರಿಗೆ ಭಾಗವಹಿಸುವಿಕೆ ಖಾತ್ರಿಗೊಳಿಸಿದೆ. ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ನೀಡಿದ ರಾಜಕೀಯ ಮೀಸಲಾತಿಯ ಪ್ರತಿಫಲವೇ ಅಧಿಕ ಸಂಖ್ಯೆಯ ಮಹಿಳೆಯರ ಪ್ರವೇಶವಾಗಿದೆ. ಈ ನವೀನ ರೀತಿಯ ಬೆಳವಣಿಗೆಯು ವಿಕೇಂದ್ರೀಕರಣ ಆಡಳಿತದಲ್ಲಿ ಸಾಮಾಜಿಕ ನ್ಯಾಯ ಒದಗಿಸುವಲ್ಲಿ ಪ್ರಧಾನವಾದ ಪಾತ್ರ ವಹಿಸಿದೆ ಎಂಬುದರಲ್ಲಿ ತಪ್ಪಿರುವುದಿಲ್ಲ.

ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರಿಗೆ ಪಾಲ್ಗೊಳ್ಳಲು ಅವಕಾಶ ದೊರೆಯಬೇಕೆಂಬ ಹೋರಾಟ ಇತ್ತೀಚಿನ ಬೆಳವಣಿಗೆಯೇನಲ್ಲ. ಮಹಿಳೆಯರಿಗೆ ಶಾಶನ ಸಭೆಗಳಲ್ಲಿ ಸೂಕ್ತ ಪ್ರಾತಿನಿಧ್ಯ ದೊರೆಯಬೇಕೆಂಬ ಒತ್ತಾಯ 1920ರಲ್ಲಿಯೇ ಪ್ರಾರಂಭವಾಗಿದೆ ಎಂದು ಹೇಳಬಹುದು. ಬ್ರಿಟಿಷರ ಆಳ್ವಿಕೆಯಲ್ಲಿ ಪ್ರಾತಿನಿದ್ಯ ಸರ್ಕಾರದ ಪ್ರತಿನಿಧಿಯಾಗಿ ಭಾರತೀಯರನ್ನು ಸಹ ಸದಸ್ಯರನ್ನಾಗಿ ಪರಿಗಣಿಸಬೇಕೆಂಬ ಬೇಡಿಕೆ ಈಡೇರಿಸಲು ಬ್ರಿಟಿಷ್ ಸರ್ಕಾರ ಸಮಿತಿಯೊಂದನ್ನು ರಚಿಸಿತು. ಈ ಸಮಿತಿಗೆ ವಿವಿಧ ಕಾರ್ಯಕ್ರಮಗಳು ಗ್ರಾಮೀಣ ಮತ್ತು ನಗರ ಪ್ರದೇಶಗಳ ಅಭಿವೃದ್ಧಿಗೆ ಸ್ಫೂರ್ತಿಯ ನೆಲೆಯಾಗಿ ಮೂಡಿಬಂದಿತು. ಆದರೆ ಈ ವ್ಯವಸ್ಥೆಯಲ್ಲಿ ಸ್ಥಳೀಯ ಆದ್ಯತೆಗಳಿಗೆ ಹಾಗೂ ಸಮುದಾಯಿಕ ನಿರ್ಧಾರ ತೆಗೆದುಕೊಳ್ಳುವಂತಹ ಪ್ರಕ್ರಿಯೆಗೆ ಅವಕಾಶವಿರಲಿಲ್ಲ. ಆದ್ದರಿಂದಾಗಿ ಈ ಯೋಜನೆ ನಿಗದಿತ ಯಶಸ್ಸನನ್ನು ಸಾಧಿಸಲು ಸಾಧ್ಯವಾಗಲಿಲ್ಲ. ಈ ರೀತಿಯ ವೈಫಲ್ಯತೆಗೆ ಕಾರಣಗಳನ್ನು ಕಂಡುಕೊಂಡು ಪರಿಹಾರಗಳನ್ನು ಸೂಚಿಸಲು ರಚಿಸಿದ ಬಲವಂತರಾಯ್ ಮೆಹ್ತಾ ಸಮಿತಿಯು ನೀಡಿದ ಅನೇಕ ಶಿಫಾರಸ್ಸುಗಳಲ್ಲಿ 'ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯ ಅಗತ್ಯತೆಯೂ ಸಹ ಒಂದಾಗಿದೆ. ಮಹಿಳೆಯರು ಪ್ರತಿಯೊಂದು ಕ್ಷೇತ್ರಗಳಲ್ಲಿಯೂ ಸಬಲೀಕರಣಗೊಳ್ಳುವ ಪಥದಲ್ಲಿ ಸಾಗಬೇಕಾದರೆ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮಹಿಳಾ ಪ್ರಾತಿನಿಧ್ಯತೆ ಅತ್ಯಗತ್ಯ ಎಂಬುದಾಗಿ ಭಾವಿಸಲಾಗಿತ್ತು. ಆದರೆ ಈ ರೀತಿಯ ಬೇಡಿಕೆಗಳನ್ನು ಹಲವು ವರ್ಷಗಳ ಹಿಂದಿನಿಂದಲೂ ಮಂಡಿಸುತ್ತಿದ್ದರೂ ಈ ಅಭಿಪ್ರಾಯವನ್ನು ಸತತವಾಗಿ ನಿರಾಕರಿಸುತ್ತಾ ಬರುತ್ತಿದ್ದುದು ಕಂಡುಬಂದಿದೆ. ಈಗಲಾದರೂ ಈ ಪ್ರವೃತ್ತಿ ಬದಲಾಗಬೇಕೆಂದು ಸಮಿತಿ ತನ್ನ ವರದಿಯಲ್ಲಿ ಸೂಚಿಸಲಾಗಿದೆ. ಆದರೆ ಈ ಸಮಿತಿಯ ಶಿಫಾರಸ್ಸಿನ ಪ್ರಕಾರ ರಚಿಸಿದ ಮೂರು ಹಂತಗಳ ವ್ಯವಸ್ಥೆಯಲ್ಲಿಯೂ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯತೆ ದೊರೆಯಲಿಲ್ಲವೆಂಬುದು ಅಂದಿನ ಕಾಲಘಟ್ಟದ ಸಾಮಾಜಿಕ ವ್ಯವಸ್ಥೆಯ ಮನಸ್ಥಿತಿಯನ್ನು ಎತ್ತಿ ತೋರಿಸುತ್ತದೆ ಎಂಬುದು ಹಲವು ಚಿಂತಕರುಗಳ ಅಭಿಪ್ರಾಯವಾಗಿದೆ.

1958ರಲ್ಲಿ ಸ್ಥಾನಿಕ ಸರ್ಕಾರದ ಕೇಂದ್ರ ಮಂಡಳಿಯೂ ಸಹ 'ಪಂಚಾಯಿತಿ'ಗಳು ನಿಜವಾಗಿಯೂ ಜನರನ್ನು ಪ್ರತಿನಿಧಿಸುವ ಸಂಸ್ಥೆಗಳಾಗಬೇಕಾದರೆ ಅವುಗಳ ಒಟ್ಟು ಸಂಖ್ಯೆಯಲ್ಲಿ ಅರ್ಧದಷ್ಟಾದರೂ ಮಹಿಳೆಯರಿರಬೇಕೆಂದು ಸರ್ಕಾರವನ್ನು ಒತ್ತಾಯಿಸಲಾಯಿತು. ಕೊನೆಯದಾಗಿ ಪಂಚಾಯಿತಿಗಳಲ್ಲಿ ಕನಿಷ್ಟ ಎರಡು ಸ್ಥಾನಗಳನ್ನಾದರೂ ಮಹಿಳೆಯರಿಗೆ ಮೀಸಲಿಡಬೇಕು. ಒಂದು ವೇಳೆ ಈ ಸ್ಥಾನಗಳಲ್ಲಿ ಯಾವುದೇ ಮಹಿಳೆಯು ಆಯ್ಕೆಯಾಗದಿದ್ದಲ್ಲಿ, ಆ ಸ್ಥಾನಗಳನ್ನು ಕೋ–ಆಪ್ಟ್ ಮಾಡುವ ಮೂಲಕವಾಗಿಯಾದರೂ ಭರ್ತಿ ಮಾಡಲು ಅವಕಾಶ ನೀಡಬೇಕೆಂಬುದಾಗಿ ಸರ್ಕಾರಕ್ಕೆ ಈ ಮಂಡಳಿಯು ಅಗತ್ಯ ಶಿಫಾರಸ್ಸು ಮಾಡಿತು. ಇದೇ ಸಂದರ್ಭದಲ್ಲಿ ಭಾರತದಲ್ಲಿ ಮಹಿಳೆಯರ ಸ್ಥಿತಿಗತಿಯನ್ನು ಅರಿಯಲು ರಚಿಸಿದ ಸಮಿತಿಯು ಪಂಚಾಯಿತಿಗಳಲ್ಲಿ ಮಹಿಳೆಯರ ಸಾಂಕೇತಿಕ ಪ್ರಾತಿನಿಧ್ಯತೆಯಿಂದ ಯಾವುದೇ ದಿಟ್ಟತನದ ಕ್ರಮವನ್ನು ಕೈಗೊಳ್ಳಲು ಸಾಧ್ಯವಿಲ್ಲ ಎಂಬ ನಿರ್ಣಯಕ್ಕೆ ಬರಲಾಯಿತು. ಆದುದರಿಂದ ಮಹಿಳೆಯರಿಗೆ ಶಾಸನಬದ್ದ ಅಧಿಕಾರ ಸಿಗಬೇಕು ಎಂಬುದಾಗಿ ಪ್ರತಿಪಾದಿಸಿದ್ದರೂ ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಪ್ರಾತಿನಿದ್ಯ ಹೆಚ್ಚಿಸುವಂತಹ ಯಾವುದೇ ಬೆಳವಣಿಗೆಗಳು ಕಂಡುಬರಲಿಲ್ಲ.

1978ರಲ್ಲಿ ಅಂದಿನ ಕಾಂಗ್ರೆಸ್ಸೇತರ ಸರ್ಕಾರದ ಪ್ರಧಾನಿಯಾಗಿದ್ದ ಮೊರಾರ್ಜಿ ದೇಸಾಯಿರವರು ಅಶೋಕ್ ಮೆಹ್ತಾ ಸಮಿತಿಯನ್ನು ರಚಿಸುವ ಮೂಲಕ ಸ್ಥಳೀಯ ಪ್ರತಿನಿಧಿಗಳನ್ನು ಒಳಗೊಂಡಂತಹ ಸ್ಥಳೀಯ ಸರ್ಕಾರಗಳ ರಚನೆಗೆ ಆದ್ಯತೆ ನೀಡಲಾಯಿತು. ಈ ಸಮಿತಿಯು ನೀಡಿದ ಶಿಫಾರಸ್ಸಿನ ಹಲವು ಪ್ರಮುಖ ಅಂಕಗಳಲ್ಲಿ ಮಹಿಳಾ ಮೀಸಲಾತಿಯು ಕೂಡ ಒಂದಾಗಿದೆ. ಈ ವರದಿಯನ್ವಯ 1986ರಲ್ಲಿ ಜಾರಿಗೆ ತಂದ ಎರಡು ಹಂತದ ಪಂಚಾಯತಿ ವ್ಯವಸ್ಥೆಯನ್ನು ಕರ್ನಾಟಕ ರಾಜ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ಜಿಲ್ಲಾ ಹಾಗೂ ಮಂಡಲ ಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಸದಸ್ಯತ್ವ ಸ್ಥಾನಗಳಲ್ಲಿ ಶೇ.25ರಷ್ಟನನ್ನು ಮೀಸಲಿಡಲಾಯಿತು. ಈ ವ್ಯವಸ್ಥೆಯ ಸಕಾರಾತ್ಮಕ ಅಂಶಗಳಿಂದ ಪ್ರೇರಿತರಾಗಿ 1993ರ ಅವಧಿಯಲ್ಲಿ ಪ್ರಧಾನಿಯಾಗಿದ್ದ ರಾಜೀವಗಾಂಧಿಯವರ ಆಸಕ್ತಿಯು ಸಂವಿಧಾನಕ್ಕೆ 73ನೇ ತಿದ್ದುಪಡಿ ತರಲು ನಾಂದಿಯಾಯಿತು. ಈ ತಿದ್ದುಪಡಿ ಅನ್ವಯ ದೇಶಾದ್ಯಂತ ಎಲ್ಲಾ ರಾಜ್ಯಗಳಲ್ಲಿಯೂ ಮೂರು ಹಂತಗಳ ಪಂಚಾಯತ್‌ರಾಜ್ ವ್ಯವಸ್ಥೆ ಅಸ್ತಿತ್ವದಲ್ಲಿದೆ. ಈ ವ್ಯವಸ್ಥೆಯಲ್ಲಿ 1/3ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾಗಿಡುವ ಮೂಲಕ ರಾಜಕೀಯ ಕ್ಷೇತ್ರಕ್ಕೆ ಮಹಿಳೆಯರು ಕಡ್ಡಾಯವಾಗಿ ಪ್ರವೇಶಿಸುವ ಅವಕಾಶ ನೀಡಲಾಯಿತು. ಕೇವಲ ಸದಸ್ಯ ಸ್ಥಾನಗಳಿಗಷ್ಟೇ ಈ ಮೀಸಲಾತಿ ಸೀಮಿತವಾಗದೇ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೂ ಸಹ ಮೀಸಲಾತಿಯನ್ನು ವಿಸ್ತರಿಸಲಾಯಿತು. ನಾಮಕರಣಗೊಳ್ಳುವ ಸ್ಥಾನಗಳಿಗೆ ಮಾತ್ರ ಸೀಮಿತವಾಗಿದ್ದು ರಾಜಕೀಯ ಪ್ರಭಾವವಿರುವ ಕುಟುಂಬಗಳಿಗೆ ಮಾತ್ರ ಸಿಗುವಂತಿದ್ದ ಈ ಅವಕಾಶ ಪ್ರಸ್ತುತ ಸಾರ್ವತ್ರಿಕವಾಗಿರುವುದು ಪ್ರಶಂಸನೀಯವಾದುದಾಗಿದೆ.

ಎಲ್ಲಾ ವರ್ಗದ ಎಲ್ಲಾ ಸಮುದಾಯಗಳಿಗೆ ಸೇರಿದ ಮಹಿಳೆಯರು ರಾಜಕೀಯ ಕ್ಷೇತ್ರಕ್ಕೆ ಪಾದಾರ್ಪಣೇ ಮಾಡಲು ಸಹಕಾರಿಯಾದ ಈ ತಿದ್ದುಪಡಿಯು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ 'ಮೌನಕ್ರಾಂತಿ'ಗೆ ನಾಂದಿ ಹಾಡಿದೆ. ಇಂದಿನ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಶೇ.50ರಷ್ಟು ಮೀಸಲಾತಿ ಕಲ್ಪಿಸಿಕೊಡುವ ನಿರ್ಣಯದಿಂದ ಮಹಿಳೆಯರ ರಾಜಕೀಯ ಸಬಲೀಕರಣಕ್ಕೆ ಇನ್ನಷ್ಟು ಒತ್ತು ಸಿಕ್ಕಿದೆ ಎನ್ನುವುದು ಅನೇಕ ಚಿಂತಕರ ಅಭಿಪ್ರಾಯವಾಗಿದೆ.

ಪ್ರಸ್ತುತ ದೇಶಾದ್ಯಂತ ಸ್ಥಳೀಯ ಸರ್ಕಾರಗಳ ರಚನೆಯಲ್ಲಿ ಅಧಿಕ ಸಂಖ್ಯೆಯ ಮಹಿಳೆಯರ ಪ್ರಾತಿನಿಧ್ಯಕ್ಕೆ ಅಕವಾಶ ದೊರೆತಂತಾಗಿದೆ. ಒಟ್ಟು 52ಲಕ್ಷ ಚುನಾಯಿತ ಪ್ರತಿನಿಧಿಗಳಲ್ಲಿ ಅಂದಾಜು 18 ರಿಂದ 20ಲಕ್ಷ ಮಹಿಳಾ ಪ್ರತಿನಿಧಿಗಳನ್ನು ಕಾಣುವಂತಾಗಿದೆ. ಏಕಕಾಲದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಇಷ್ಟೊಂದು ಸ್ಥಾನಗಳನ್ನು ಮೀಸಲಿಟ್ಟಾಗ ಮಹಿಳೆಯರು ರಾಜಕೀಯ ಕ್ಷೇತ್ರದ ಈ ಅವಕಾಶವನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಾರೆ ಎಂಬ ನಂಬಿಕೆ ಕೆಲವರಲ್ಲಿ ಇರಲಿಲ್ಲ. ಆದರೆ ಮಹಿಳೆಯರು ಮೀಸಲಾತಿಗೆ ನಿಗದಿಪಡಿಸಿದ ಪ್ರಮಾಣವನ್ನು ಮೀರಿ ರಾಜಕೀಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿ ಈ ನಂಬಿಕೆಯನ್ನು ಇನ್ನಷ್ಟು ವೃದ್ದಿಸಿದ್ದಾರೆ.

**ಉಪಸಂಹಾರ**

ಪ್ರತಿಯೊಬ್ಬ ಪ್ರಜೆಯು ಪ್ರಜಾಪ್ರಭುತ್ವ ವ್ಯವಸ್ಥೆಯ ಅವಿಭಾಜ್ಯ ಅಂಗ ಎಂಬ ಪ್ರೊ. ಶೀಲೆಯವರ ಅಭಿಪ್ರಾಯ ಇಲ್ಲಿ ನ್ಯಾಯೋಚಿತವಾಗಿಯೇ ಇದೆ. ಅಂದರೆ ರಾಜಕೀಯ ಮೀಸಲಾತಿ ವ್ಯವಸ್ಥೆಯಿಂದ ಮಹಿಳೆಯರು ಪ್ರಜಾಪ್ರಭುತ್ವದ ಆಂತರಿಕ ಬೆಳವಣಿಗೆಗೆ ತಮ್ಮದೇ ಆದ ಕಾಣಿಕೆ ಸಲ್ಲಿಸುತ್ತಿದ್ದಾರೆ. ಅಂದರೆ ತಮ್ಮ ಅಭಿಪ್ರಾಯಗಳನ್ನು ನಿರ್ಭಯ ಮತ್ತು ನಿಸ್ಸಮಕೋಚವಾಗಿ ಇತರರೊಂದಿಗೆ ಹಂಚಿಕೊಳ್ಳುವ, ಸ್ವಹಿತಾಸಕ್ತಿ ಕಾಪಾಡಿಕೊಳ್ಳುವ, ಆಡಳಿತಯಂತ್ರವನ್ನು ಚುರುಕುಗೊಳಿಸುವ, ಕಾಲ ಮಿತಿಯೊಳಗೆ ಯೋಜನೆಗಳನ್ನು ಕಾರ್ಯಗತಗೊಳಿಸುವ ದಿಸೆಯಲ್ಲಿ ಪ್ರಜಾಪ್ರಭುತ್ವವನ್ನು ಬಲಪಡಿಸುವಲ್ಲಿ ಮೀಸಲಾತಿ ಅವಕಾಶ ಮಹಿಳೆಯರಿಗೆ ಒಂದು ಸೂಕ್ತ ವೇದಿಕೆ ಎನ್ನಬಹುದು.

**ಪರಾಮರ್ಶನ ಗ್ರಂಥಗಳು**


- ಅನುರಾಧ ಎಸ್. (2018). *ಗ್ರಾಮೀಣ ರಾಜಕೀಯ ಮಹಿಳೆ,* ಲಿಖಿತ್ ಪ್ರಕಾಶನ, ಮೈಸೂರು.
- ಚಂದ್ರಶೇಖರ್, ಕೆ. (2006) ಅಭಿವೃದ್ಧಿ ಪಥದಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳು. ಚೇತನ ಬುಕ್‌ಹೌಸ್, ಮೈಸೂರು.
- ಗಾಯತ್ರಿ, ಎನ್. (2012). *ಮಹಿಳಾ ಮೀಸಲಾತಿ ಮತ್ತು ಲಿಂಗ ರಾಜಕಾರಣ.* ಲಡಾಯಿ ಪ್ರಕಾಶನ, ಗದಗ.
- ಶ್ರೀಮಂತಿಕೆ. (2001). *ಆಧುನಿಕ ಭಾರತದಲ್ಲಿ ಮಹಿಳೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.